(೨) ಮೈಸೂರು ನಗರದಲ್ಲಿ ಶಾಲಾ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ಮಾಡಿರುವ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಮೈಸೂರು ನಗರದಲ್ಲಿ ಅಪ್ರಾಪ್ತ ವಯಸ್ಸಿನ ಶಾಲಾಬಾಲಕಿಯೊಬ್ಬಳ ಮೇಲೆ ನಾಲ್ವರು ವಿದೇಶಿ ವಿದ್ಯಾರ್ಥಿಗಳು ನಾಲ್ಕು ಬೇರೆ ಬೇರೆ ದಿನಗಳಂದು ಅತ್ಯಾಚಾರವೆಸಗಿರುವ ಅಮಾನುಷ ಕೃತ್ಯ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸಿದ್ಧಾರ್ಥ ನಗರದ ನಿವಾಸಿಯಾದ ಅಬೆಸರ್ಕಾರಿ ಉದ್ಯೋಗಿಯೊಬ್ಬರ ಮಗಳಾದ ೧೪ ವರ್ಷದ ಈ ಬಾಲಕಿಯು ನಜರ್‌ಬಾದ್‌ಶಾಲೆಯೊಂದರಲ್ಲಿ ೧೦ನೇ ತರಗತಿಯಲ್ಲಿ ಓದುತ್ತಿದ್ದಳೆಂದು ತಿಳಿದು ಬಂದಿದ್ದು, ಈ ಅತ್ಯಾಚಾರದ ಸಂದರ್ಭದಲ್ಲಿ ಪಿಸ್ತೂಲು ತೋರಿಸಿ ಬೆದರಿಸಿ ಈ ಹೇಯಕೃತ್ಯ ನಡೆದಿದೆಯೆಂಬ ವಿಷಯದ ಬಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮೈಸೂರು ನಗರದಲ್ಲಿ ನಡೆದಂತಹ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಇವತ್ತು ಸಂಜೆಯೊಳಗೆ ಒಂದು ಹೇಳಿಕೆಯನ್ನು ಕೊಡುತ್ತೇನೆ.

(೩) ಬ್ರಹ್ಮಾವರ ಮಂತ್ತು ಕೋಟೆಗಳಲ್ಲಿ ಅರಕ್ಷಕ ಠಾಣೆ ಸ್ಥಾಪಿಸುವ ಬಗ್ಗೆ.

ಶ್ರೀ ಜಿ. ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಬ್ರಹ್ಮಾವರ ಮತ್ತು ಕೋಟೆಗಳಲ್ಲಿರುವ ಎರಡು ಅರಕ್ಷಕ ಠಾಣೆಗಳು ಕರಾವಳಿಯ ಅಂಚಿನಲ್ಲಿರುವ ರಾಷ್ಟ್ರೀಯಕ ಹೆದ್ದಾರಿಯಲ್ಲಿರುತ್ತದೆ. ಇದರಿಂದ ರಾಷ್ಟ್ರೀಯ ಹೆದ್ದಾರಿಯ ಪೂರ್ವಭಾಗದಲ್ಲಿ ವಿಶಾಲವಾಗಿರುವ ಮತ್ತು ಅಷ್ಟೊಂದು ಅಭಿವೃದ್ಧಿ ಕಾಣದ ಊರುಗಳಲ್ಲಿ ಶಾಂತಿ ಮತ್ತು ಶಿಸ್ತುಪಾಲನೆ ಸರಿಯಾದ ಸಮಯದಲ್ಲಿ ಪಾಲಿಸಲೂ ಕಷ್ಟ ಸಾಧ್ಯವಾಗುತ್ತದೆ.

ಇದರಿಂದ ಸಹಸ್ರಾರು ಯಾತ್ರಿಕರು ಸಂದರ್ಶಿಸುವ ಪ್ರಸಿದ್ಧ ದೇವಸ್ಥಾನ ಇರುವ ಮಂಡಲ ಕೇಂದ್ರವಾಗಿರುವ ಮಂದರ್ತಿ ಅಥವಾ ಇತಿಹಾಸ ಪ್ರಸಿದ್ಧ ಊರು ಕೊಕ್ಕರ್ಣೆ ಇಲ್ಲಿ ಕನಿಷ್ಟಪಕ್ಷ ಉಪ ಅರಕ್ಷಕ ಠಾಣೆಯನ್ನು ಸ್ಥಾಪಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ಮತ್ತು ಕೋಟಾದಲ್ಲಿ ಅರಕ್ಷಕ ಠಾಣೆಗಳು ಇವೆ. ಅವುಗಳಿಗೆ ಹೆಚ್ಚುವರಿಯಾಗಿ ಸಿಬ್ಬಂದಿಯನ್ನು ಕೊಡಬೇಕಾದಂಥ ವಿಚಾರ ಅಗತ್ಯ ಇದೆ. ಮತ್ತು ಈ ಉಪ ಅರಕ್ಷಕ ಠಾಣೆಗಳನ್ನು ಮಂದರ್ತಿ ಅಥವಾ ಕೊಕ್ಕರ್ಣೆಯಲ್ಲಿ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಸರ್ಕಾರ ಈ ಪ್ರಸ್ತಾವನೆಯನ್ನು ಪರಿಶೀಲನೆ ಮಾಡುತ್ತದೆ.

(೪) ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪೋಲೀಸ್ ಪಹರೆ ಹೆಚ್ಚಿಸುವುದು.

SRI K. LAKKAPPA (Kunigal).—We have been observing daily large number of accidents, robberies, dacoities taking place in National Highways. Waylaying and other criminal activities have become routine. There is no safety for travelling public. It is very shocking to note that many people are being killed due to negligent driving and without getting any medical aid, etc., on the National Highway. Therefore in the absence of police patrolling telephone booths in National Highways in the State, loss of life and property is on the increase. The Government should provide Special Police Squad with first-aid facilities, etc., without any delay and also provide Telephone booths at various points in National Highways. This would prevent over-speed and negligent driving